# ಕರ್ನಾಟಕ ಸರ್ಕಾರ
## ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)
## ಪ್ರಥಮ ಪಿಯುಸಿ ಮಾದರಿ ಪ್ರಶ್ನೆಪತ್ರಿಕೆ: 2024–25
## ಅರ್ಥಶಾಸ್ತ್ರ (22)

ಸಮಯ : 3 ಗಂಟೆಗಳು    ಗರಿಷ್ಠ ಅಂಕಗಳು: 80

ಸೂಚನೆಗಳು: 1. ಪ್ರಶ್ನೆಗಳ ಸಂಖ್ಯೆಗಳನ್ನು ಮಾರ್ಜಿನ್‌ನಲ್ಲಿ ಸ್ಪಷ್ಟವಾಗಿ ಬರೆಯಿರಿ.
2. ಪ್ರತಿ ಪ್ರಶ್ನೆಗೆ ಉತ್ತರವು ನಿರಂತರವಾಗಿರಬೇಕು.
3. ಭಾಗ–ಎ ನಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

### ಭಾಗ–ಎ

**I. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ (ಪ್ರತಿಯೊಂದಕ್ಕೂ 1 ಅಂಕ ಮಾತ್ರ)    5x1=5**

1. ನೀವು ಉದ್ಯೋಗದಲ್ಲಿದ್ದು, ಸಂಭಾವನೆಗಾಗಿ ಕೆಲಸ ಮಾಡುತ್ತಿದ್ದರೆ, ನಿಮ್ಮನ್ನು ಹೀಗೆನ್ನುವರು.
   (ಎ) ನಿರುದ್ಯೋಗಿ    (ಬಿ) ನಾಯಕ
   (ಸಿ) ಉದ್ಯೋಗಿ    (ಡಿ) ಧರ್ಮದರ್ಶಿ
2. ವ್ಯಾಪ್ತಿಯು,
   (ಎ) ಅತಿ ದೊಡ್ಡ ಮತ್ತು ಅತಿ ಚಿಕ್ಕ ಪ್ರಾಪ್ತಾಂಕದ ನಡುವಿನ ವ್ಯತ್ಯಾಸವಾಗಿದೆ
   (ಬಿ) ಅತಿ ದೊಡ್ಡ ಮತ್ತು ಅತಿ ಚಿಕ್ಕ ಪ್ರಾಪ್ತಾಂಕದ ಸರಾಸರಿ
   (ಸಿ) ಅತಿ ದೊಡ್ಡ ಮತ್ತು ಅತಿ ಚಿಕ್ಕ ಪ್ರಾಪ್ತಾಂಕದ ಅನುಪಾತ
   (ಡಿ) ಅತಿ ದೊಡ್ಡ ಮತ್ತು ಅತಿ ಚಿಕ್ಕ ಪ್ರಾಪ್ತಾಂಕದ ಮೊತ್ತ
3. ಶತಾಂಕಗಳು ವಿತರಣೆಯನ್ನು ಎಷ್ಟು ಸಮಭಾಗಗಳಾಗಿ ವಿಭಾಗಿಸುತ್ತದೆ?
   (ಎ) 100    (ಬಿ) 75    (ಸಿ) 25    (ಡಿ) 50
4. ತಪಸ್ ಮಜುಮ್‌ದಾರ್ ಸಮಿತಿಯು ಶಿಕ್ಷಣಕ್ಕಾಗಿ ಜಿ.ಡಿ.ಪಿ.ಯ ಎಷ್ಟರಷ್ಟು ವೆಚ್ಚ ಮಾಡಬೇಕೆಂದು ಅಂದಾಜು ಮಾಡಿದೆ?
   (ಎ) 4%    (ಬಿ) 6%    (ಸಿ) 8%    (ಡಿ) 5%
5. ಬಹುತೇಕ ಕೃಷಿ ಕಾರ್ಮಿಕರು
   (ಎ) ಶ್ರೀಮಂತರು    (ಬಿ) ಮಧ್ಯಮ ವರ್ಗದವರು
   (ಸಿ) ಬಡವರು    (ಡಿ) ಉನ್ನತ ವರ್ಗ

**II. ಆವರಣದಲ್ಲಿರುವ ಸರಿಯಾದ ಉತ್ತರವನ್ನು ಆರಿಸಿ, ಖಾಲಿ ಬಿಟ್ಟ ಸ್ಥಳವನ್ನು ಭರ್ತಿ ಮಾಡಿ. (ಪ್ರತಿಯೊಂದಕ್ಕೂ 1 ಅಂಕ ಮಾತ್ರ)    5x1=5**

(ಪ್ರಶ್ನಾವಳಿ, 1921, ಇಂಗಾಲದ ಡೈಆಕ್ಸೈಡ್, ದತ್ತಾಂಶ, 1958, ಆವೃತ್ತಿ ಅನುವಿನ್ಯಾಸ)

6. ಅಸತತ ದತ್ತಾಂಶಗಳ ಆವೃತ್ತಿ ವಿತರಣೆಯನ್ನು __________ ಎಂದು ಕರೆಯವರು.
7. ಸಮೀಕ್ಷೆಯು ________ಸಂಗ್ರಹಣೆಯ ವಿಧಾನವನ್ನು ನಿರ್ಧರಿಸಲು ಸಹಾಯಕವಾಗಿದೆ.
8. ________ ಭಾರತದ ಜನಸಂಖ್ಯಾ ಸ್ಥಿತ್ಯಂತರದ ಎರಡನೇ ಹಂತ ಪ್ರಾರಂಭವಾದ ವರ್ಷ.
9. ಉಷ್ಣ ವಿದ್ಯುತ್ ಸ್ಥಾವರಗಳು _________ ಅನ್ನು ದೊಡ್ಡ ಪ್ರಮಾಣದಲ್ಲಿ ಬಿಡುಗಡೆ ಮಾಡುತ್ತವೆ,
10. ಮಹಾ ಮುಂಜಿಗಿತ ಅಭಿಯಾನ ಪರಿಚಯಿಸಿದ ವರ್ಷ________

**III.** **ಹೊಂದಿಸಿ ಬರೆಯಿರಿ (ಪ್ರತಿಯೊಂದಕ್ಕೂ 1 ಅಂಕ ಮಾತ್ರ)** **5x1=5**

11.

| A | B |
|---|---|
| a) ವ್ಯೆಯಕ್ತಿಕ ಸಂದರ್ಶನ | i) ಕೃಷಿ ಬೆಲೆ ಸೂಚ್ಯಂಕ |
| b) $Q_1$, $Q_2$, $P_{25}$, $P_{50}$ | ii) ಜಾಗತಿಕ ಬೆಳವಣಿಗೆ ಕೇಂದ್ರಗಳು |
| c) A P I | iii) ವಿಭಾಜಕ ಮೌಲ್ಯಗಳು |
| d) ಡ್ಯೂಶ್ಚೆ ಬ್ಯಾಂಕು | iv) ಹಣ್ಣುಗಳ ಉತ್ಪಾದನೆ |
| e) ಸುವರ್ಣ ಕ್ರಾಂತಿ | v) Q3 |
| | vi) ಅಧಿಕ ವೆಚ್ಚ |

**IV.** **ಕೆಳಗಿನ ಪ್ರಶ್ನೆಗಳಿಗೆ ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿ.(ಪ್ರತಿಯೊಂದಕ್ಕೂ 1 ಅಂಕ ಮಾತ್ರ)** **5x1=5**

12. ರಾಷ್ಟ್ರೀಯ ವರಮಾನವನ್ನು ಕೂಲಿ, ಲಾಭ, ಗೇಣಿ ಮತ್ತು ಬಡ್ಡಿಗಳೆಂದು ಭಾಗ ಮಾಡುವುದನ್ನು ಏನೆಂದು ಕರೆಯುತ್ತೇವೆ?

13. ಈ ಕೆಳಗಿನ ದತ್ತಾಂಶಗಳಿಗೆ ಬಹುಲಕವನ್ನು ಕಂಡುಹಿಡಿಯಿರಿ.

| | | | | | | | | | | | | |
|---|---|---|---|---|---|---|---|---|---|---|---|---|
| X | 15 | 10 | 12 | 25 | 35 | 5 | 36 | 32 | 28 | 15 | 48 | 15 |

14. ವಸಾಹತುಶಾಹಿ ಸರ್ಕಾರ ಕಾಲುವೆ ಸಾರಿಗೆಯನ್ನು ಏಕೆ ರದ್ದುಪಡಿಸಿತು?

15. IBRD ಯನ್ನು ವಿಸ್ತರಿಸಿ.

16. ಶಿಶು ಮರಣ ದರದ ಅರ್ಥ ನೀಡಿ.

## ಭಾಗ–ಬಿ

**V.** **ಈ ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ 4 ವ್ಯಾಕ್ಯಗಳಲ್ಲಿ ಉತ್ತರಿಸಿ.(ಪ್ರತಿಯೊಂದಕ್ಕೂ 2 ಅಂಕ ಮಾತ್ರ)** **3x2=6**

17. ದತ್ತಾಂಶಗಳ ವರ್ಗೀಕರಣದ ವಿಧಗಳನ್ನು ಹೆಸರಿಸಿ.

18. ಮದ್ಯಬಿಂದುವನ್ನು ಕಂಡು ಹಿಡಿಯುವ ಸೂತ್ರ ತಿಳಿಸಿ.

19. r ನ ಬೆಲೆ 1, –1 ಮತ್ತು 0 ಆದಾಗ ಅದರ ಆರ್ಥವನ್ನು ತಿಳಿಸಿ.

20. ಸಗಟು ಬೆಲೆ ಸೂಚ್ಯಾಂಕ ಎಂದರೇನು? ಅದರ ನ್ಯೂನ್ಯತೆಗಳನ್ನು ಬರೆಯಿರಿ.

21. ಯೋಜನೆಯನ್ನು ಅಭಿವೃದ್ಧಿಪಡಿಸುವಲ್ಲಿ ಯಾವುದಾದರೂ ನಾಲ್ಕು ಹಂತಗಳನ್ನು ಬರೆಯಿರಿ.

**VI.** **ಈ ಕೆಳಗಿನ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ 4 ವ್ಯಾಕ್ಯಗಳಲ್ಲಿ ಉತ್ತರಿಸಿ.(ಪ್ರತಿಯೊಂದಕ್ಕೂ 2 ಅಂಕ ಮಾತ್ರ)** **4x2=8**

22. ಕೈಗಾರಿಕಾ ವಲಯವನ್ನು ಸುಧಾರಿಸಲು ಸರ್ಕಾರವು ಏಕೆ ಮಹತ್ವದ ಪಾತ್ರವಹಿಸಿತು?

23. ಉದಾರೀಕರಣದ ನಾಲ್ಕು ಉದ್ದೇಶಗಳನ್ನು ತಿಳಿಸಿ.

24. ಹೊರಗುತ್ತಿಗೆಯ ಸೇವೆಗಳಾವುವು?

25. ಆರೋಗ್ಯ ವೆಚ್ಚಗಳ ವಿವಿಧ ರೂಪಗಳಾವುವು?

26. ಗ್ರಾಮೀಣ ಸಾಲದ ಸಾಂಸ್ಥಿಕ ಮೂಲಗಳನ್ನು ಹೆಸರಿಸಿ.

27. ಸಾವಯವ ಬೇಸಾಯದ ಎರಡು ಲಾಭಗಳನ್ನು ತಿಳಿಸಿ.

## ಭಾಗ–ಸಿ

**VII. ಈ ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 12 ವಾಕ್ಯಗಳಲ್ಲಿ ಉತ್ತರಿಸಿ. (ಪ್ರತಿಯೊಂದಕ್ಕೂ 4 ಅಂಕಗಳು) 2x4=8**

28. ಸಂಖ್ಯಾಶಾಸ್ತ್ರವು ಅರ್ಥಶಾಸ್ತ್ರದ ಅಧ್ಯಯನಕ್ಕೆ ಹೇಗೆ ನೆರವಾಗಿದೆ ಎಂಬುದನ್ನು ಸಂಕ್ಷಿಪ್ತವಾಗಿ ವಿವರಿಸಿ.

29. ಒಂದು ಕೋಷ್ಟಕದ ನಮೂನೆಯನ್ನು ಬರೆದು ಅದರ ಭಾಗಗಳನ್ನು ಗುರುತಿಸಿ.

30. ಚದರಿಕೆಯ ಚಿತ್ರ ಬಿಡಿಸಿರಿ ಮತ್ತು ಸಹಸಂಬಂಧವನ್ನು ನಿರ್ಣಯಿಸಿ.

| X | 10 | 20 | 30 | 40 | 50 | 60 | 70 | 80 |
|---|---|---|---|---|---|---|---|---|
| Y | 35 | 30 | 35 | 45 | 50 | 45 | 60 | 55 |

31. ಈ ಕೆಳಗಿನ ದತ್ತಾಂಶಗಳಿಗೆ ಲಾಸ್ಪೆಯರ್ ವಿಧಾನದ ಮೂಲಕ ಸೂಚ್ಯಾಂಕವನ್ನು ಕಂಡುಹಿಡಿಯಿರಿ.

| ಸರಕುಗಳು | $P_0$ | $Q_0$ | $P_1$ | $Q_1$ |
|---|---|---|---|---|
| A | 8 | 6 | 11 | 12 |
| B | 9 | 7 | 10 | 10 |
| C | 10 | 5 | 13 | 7 |

**VIII. ಈ ಕೆಳಗಿನ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ 12 ವಾಕ್ಯಗಳಲ್ಲಿ ಉತ್ತರಿಸಿ.(ಪ್ರತಿಯೊಂದಕ್ಕೂ 4 ಅಂಕಗಳು) 4x4=16**

32. ಸ್ವಾತಂತ್ರ್ಯ ಪೂರ್ವ ಭಾರತದ ವಿದೇಶಿ ವ್ಯಾಪಾರ ಪ್ರಮಾಣ ಮತ್ತು ದಿಕ್ಕನ್ನು ಸೂಚಿಸಿ.

33. ಪಂಚವಾರ್ಷಿಕ ಯೋಜನೆಗಳ ಗುರಿಗಳನ್ನು ವಿವರಿಸಿ.

34. ಒಬ್ಬ ವ್ಯಕ್ತಿಗೆ ವೃತ್ತಿನಿರತ ತರಬೇತಿಯ ಅಗತ್ಯತೆಯನ್ನು ಕುರಿತು ವಿವರಿಸಿ.

35. ಗ್ರಾಮೀಣಾಭಿವೃದ್ಧಿಯ ಪ್ರಮುಖ ಸಮಸ್ಯೆಗಳನ್ನು ವಿವರಿಸಿ.

36. ಪರಿಸರದ ಸಂಪನ್ಮೂಲಗಳ ಪೂರೈಕೆ ಮತ್ತು ಬೇಡಿಕೆ ತಿರುವು ಮುರುವಾಗಿರುವುದನ್ನು ವಿವರಿಸಿ.

37. ಪಾಕಿಸ್ತಾನದಲ್ಲಿ ಕಡಿಮೆ ಬೆಳವಣಿಗೆ ಮತ್ತು ಬಡತನದ ಮರುಹುಟ್ಟಿಗೆ ಕಾರಣಗಳನ್ನು ವಿವರಿಸಿ.

## ಭಾಗ–ಡಿ

**IX. ಈ ಕೆಳಗಿನ ಯಾವುದಾದರೂ ಒಂದು ಪ್ರಶ್ನೆಗೆ 20 ವಾಕ್ಯಗಳಲ್ಲಿ ಉತ್ತರಿಸಿ.(ಪ್ರತಿಯೊಂದಕ್ಕೂ 6 ಅಂಕಗಳು) 1x6=6**

38. ಈ ಕೆಳಗಿನ ಕೋಷ್ಟಕವು ಬಿಹಾರದ ಒಂದು ಜಿಲ್ಲೆಯಲ್ಲಿ 6–14 ವರ್ಷದ ಮಕ್ಕಳ ಲಿಂಗಾನುಸಾರ ದಾಖಲಾತಿಯನ್ನು ತೋರಿಸುತ್ತದೆ. ಈ ದತ್ತಾಂಶಗಳಿಗೆ ಸಂಘಟಕ ಸ್ತಂಭ ರೇಖಾ ಚಿತ್ರ ರಚಿಸಿ.

| ಲಿಂಗ | ದಾಖಲಾತಿ (%) | ಶಾಲೆಯಿಂದ ಹೊರಗುಳಿದವರು (%) |
|---|---|---|
| ಬಾಲಕರು | 91 | 9 |
| ಬಾಲಕಿಯರು | 59 | 41 |
| ಒಟ್ಟು | 75 | 25 |

39. ಈ ಕೆಳಕಂಡ ದತ್ತಾಂಶಗಳಿಗೆ ನೇರ ವಿಧಾನ, ಊಹಾತ್ಮಕ ವಿಧಾನ ಮತ್ತು ಹಂತ ವಿಚಲನಾ ವಿಧಾನಗಳ ಮೂಲಕ ಅಂಕಗಣಿತ ಸರಾಸರಿಯನ್ನು ಕಂಡುಹಿಡಿಯಿರಿ. 40, 50, 55, 78, 58

**X. ಈ ಕೆಳಗಿನ ಯಾವುದಾದರೂ ಒಂದು ಪ್ರಶ್ನೆಗೆ 20 ವಾಕ್ಯಗಳಲ್ಲಿ ಉತ್ತರಿಸಿ.(ಪ್ರತಿಯೊಂದಕ್ಕೂ 6 ಅಂಕಗಳು)** **1x6=6**

40. ಕೃಷಿ ಕ್ಷೇತ್ರದ ಮೇಲಾದ ಸುಧಾರಣೆಗಳ ಪರಿಣಾಮಗಳನ್ನು ವಿವರಿಸಿ

41. ಭಾರತದಲ್ಲಿ ಉದ್ಯೋಗವಕಾಶಗಳನ್ನು ಸೃಷ್ಟಿಸುವಲ್ಲಿ ಸರ್ಕಾರದ ಪಾತ್ರವೇನು? ಚರ್ಚಿಸಿ.

## ಭಾಗ–ಇ

**XI. ಈ ಕೆಳಗಿನ ಯಾವುದಾದರು ಎರಡು ಕಾರ್ಯಭಾರ ಮತ್ತು ನಿಯೋಜನೆ ಆಧಾರಿತ ಪ್ರಶ್ನೆಗಳಿಗೆ ಉತ್ತರಿಸಿ.** **2x5=10**

**(ಪ್ರತಿಯೊಂದಕ್ಕೂ 5 ಅಂಕಗಳು)**

42. ನೀವು ಒಬ್ಬ ಸಂಶೋಧನಾ ವಿದ್ಯಾರ್ಥಿಯಾಗಿದ್ದು, ನೀವು ಶಾಲೆಗಳಲ್ಲಿ ಬಿಸಿಯೂಟದ ಮಾದರಿ ಸಮೀಕ್ಷೆ ಮಾಡಬೇಕಾಗಿದೆ ಎಂದುಕೊಳ್ಳಿ, ನಿಮ್ಮ ಸಮೀಕ್ಷೆಗೆ ಸರಿ ಹೊಂದುವ ಉತ್ತಮವಾದ ಪ್ರಶ್ನಾವಳಿಯನ್ನು ತಯಾರಿಸಿ.

43. ಈ ಕೆಳಗಿನ ಪಟ್ಟಿಯಲ್ಲಿ ಔಪಚಾರಿಕ ಮತ್ತು ಅನೌಪಚಾರಿಕ ಕೆಲಸಗಾರರನ್ನು ಗುರುತಿಸಿ.

1. ಬೇಕರಿ ಮಾಲೀಕ
2. ಕೈಮಗ್ಗದ ನೇಕಾರ
3. SBI ನ ಮ್ಯಾನೆಜರ್
4. ರಸ್ತೆ ಬದಿಯ ಮಾರಾಟಗಾರ
5. ಸರ್ಕಾರಿ ಆಸ್ಪತ್ರೆಯಲ್ಲಿನ ನರ್ಸ್
6. ಸರ್ಕಾರಿ ಶಾಲೆಯ ಶಿಕ್ಷಕ
7. ಮರಗೆಲಸದವನು (ಬಡಗಿ)
8. ಕಂದಾಯ ನಿರೀಕ್ಷಕರು
9. ಆರಕ್ಷಕರು
10. ಕೃಷಿ ಕಾರ್ಮಿಕರು

44. ಭಾರತದಲ್ಲಿ ಭೂಮಿಯ ಗುಣಮಟ್ಟ ಕ್ಷೀಣತೆಗೆ ಕಾರಣವಾಗುವ ಅಂಶಗಳನ್ನು ಪಟ್ಟಿಮಾಡಿ.

## ಭಾಗ–ಎಫ್

### ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಮಾತ್ರ

29. ಕೋಷ್ಟಕದ ಯಾವುದಾದರೂ ನಾಲ್ಕು ಭಾಗಗಳನ್ನು ವಿವರಿಸಿ.

30. ಸಹಸಂಬಂಧ ಗುಣಾಂಕದ ಯಾವುದಾದರೂ ನಾಲ್ಕು ಲಕ್ಷಣಗಳನ್ನು ವಿವರಿಸಿ.

38. ಸ್ತಂಭ ರೇಖಾ ಚಿತ್ರದ ವಿಧಗಳನ್ನು ವಿವರಿಸಿ.

*****